# ಓಮದ ಸೊಪ್ಪು



ದ್ವೇಷ ತುಂಬಿದ ವಠಾರದಲ್ಲಿ
ಬಾಳು ಸವೆಸುವ ಒಂಟಿಹೆಣ್ಣು
ಒಂದೇ ಕೋಣೆ ಚಾಡಿ ಛಿದ್ರ
ಜಗಳ ಹರಿದಾಡುವ ನೀರುಪೈಪು

ಆ ಒಣ ಭಾನುವಾರ ನೆನಪಾಗುತ್ತಿದೆ,
ಅಂದು ಮನೆಯಲ್ಲಿ
ಅಕ್ಕಿಯಿರಲಿಲ್ಲ, ಬೇಳೆಯಿರಲಿಲ್ಲ, ಮಾಂಸವಿರಲಿಲ್ಲ
ಒಂದು ಹಿಡಿ ತಾಜಾಹಸಿರು ಓಮದ ಸೊಪ್ಪನ್ನು ನೀನು ಬೇಯಿಸಿದ್ದು,
ಆದರಿಂದ ಭಾನುವಾರದ ಗಮ್ಮತ್ತು ಎಂದಿನ ಹಾಗೇ ಉಳಿದದ್ದು,

ಬರಿಸೊಪ್ಪಿನ ಊಟವದು, ಆದರೆ
ಪರಿಮಳದ ಹಬೆಯಾಡುತ್ತ ಅಂದು
ಮಾನ ಉಳಿಸಿತು ಅದು

ಶತ್ರುಗಳ ಜೊತೆ ಬದುಕುವಾಗ
ತಿಳಿಯಗೊಡಬಾರದು ಅವರಿಗೆ ನಮ್ಮ ಸಂಕಟವನ್ನು,
ಸಪ್ಪೆಯಿದ್ದರೂ ಸಾರಿನ ಮಡಿಕೆ
ಕೇಳಬಾರದು ಉಪ್ಪನ್ನೂ.

## ● ಲೋರ್ನಾ ಗುಡಿಸನ್

**ಲೋರ್ನಾ ಗೇ ಗುಡಿಸನ್** Lorna Gaye Goodison (1947–)

ವೆಸ್ಟ್ ಇಂಡೀಸ್‌ನ ಜಮೈಕಾದ ಕವಯಿತ್ರಿ, ಕತೆಗಾರ್ತಿ ಮತ್ತು ಚಿತ್ರಕಲಾವಿದೆ. 1986ರಲ್ಲಿ ಇವರಿಗೆ 'ಕಾಮನ್ವೆಲ್ತ್ ಪೊಯೆಟ್ರಿ ಪ್ರೈಜ್' ದೊರೆತಿದೆ. ವರ್ಷದಲ್ಲಿ ಕೆಲವು ತಿಂಗಳು ಅಮೆರಿಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕಿಯಾಗಿ ಕೆಲಸಮಾಡುತ್ತಾರೆ. ಇದುವರೆಗೆ ಹನ್ನೆರಡು ಕವನ ಸಂಕಲನ, ಎರಡು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'Tamarind Season', 'I Am Becoming My Mother', 'To Us, All Flowers Are Roses' ಇವರ ಕೆಲವು ಸಂಕಲನಗಳು. ವಿಶ್ವದ ಕವಿತೆಯ ಪರ್ಯದಲ್ಲಿ ಜಮೈಕಾದ ಸಂವೇದನೆ, ಭಾಷಾವೈವಿಧ್ಯ ಮತ್ತು ಸಂಸ್ಕೃತಿಯ ಸ್ವರೂಪಗಳನ್ನು ಸಮರ್ಥವಾಗಿ ತಂದವರು ಲೋರ್ನಾ. 'ಕಾವ್ಯ ಎನ್ನುವುದು ಎಲ್ಲವನ್ನೂ ಆವರಿಸಿಬಿಡುವ, ಎಲ್ಲ ನಿಗೂಢಗಳ ಒಳಹೊಗುವ ಹಿಂಸ್ರಕ ಸರ್ವಾಧಿಕಾರಿ. ಅದನ್ನು ಸೃಷ್ಟಿಸದೆ ನನಗೆ ಬೇರೆ ದಾರಿಯಿಲ್ಲ' ಎನ್ನುವ ಲೋರ್ನಾ ಮಾತು ಅವರ ಕಾವ್ಯಲೋಕಕ್ಕೆ ಹಿಡಿದ ಬೆಳಕಿಂಡಿ.